ದಿನಾಂಕಃ 25.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ 3ನೇ ಪ್ರತಿವಾದಿ ಪರ ವಕೀಲರಿಂದಃ**

ವಾದಿ ವಾಟ್ನಿ ದಾವೆ ಮಾಡಿರುತ್ತಾರೆ. ವಾದಿ ಒಟ್ಟು 5 ಆಸ್ತಿಗಳಿಗೆ ಸಂಬಂಧಿಸದಂತೆ ದಾವೆ ಹಾಕಿರುತ್ತಾಳೆ. ದಾವಾ ಆಸ್ತಿಗಳ ಚಕಬಂದಿ ನನಗೆ ಹೇಳಲು ಆಗುವುದಿಲ್ಲ. ದಾವಾ ಆಸ್ತಿ ಅ.ನಂ.1 ಮತ್ತು 2 ಹುಕ್ಕೇರಿ ತಾಲೂಕಿನ ಬೆಲ್ಲದ ಬಾಗೇವಾಡಿಯಲ್ಲಿ ಇರುತ್ತವೆ. ಬೆಲ್ಲದಬಾಗೇವಾಡಿ ಜಮೀನುಗಳು ನೀರಾವರಿ ಜಮೀನುಗಳಾಗಿದ್ದು, ಫಲವತ್ತಾದ ಜಮೀನುಗಳು ಇರುವುದರಿಂದ ಕಬ್ಬು, ಗೋವಿನ ಜೋಳ, ಬಾಳೆ ಬೆಳೆಗಳನ್ನು ಬೆಳೆಯುತ್ತಾರೆ ಎಂದರೆ ನಿಜ. ಸದರಿ ಜಮೀನುಗಳಿಗೆ 12 ತಿಂಗಳು ನೀರಾವರಿ ಸೌಲಭ್ಯ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನೀರಾವರಿ ಜಮೀನುಗಳಿಂದ ವರ್ಷಕ್ಕೆ ಸುಮಾರು ರೂ.50-60 ಲಕ್ಷ ಆದಾಯ ಬರುತ್ತದೆ ಎಂದರೆ ಸರಿಯಲ್ಲ.

ನಾನು ಮತ್ತು 1ನೇ ಪ್ರತಿವಾದಿ ಗೃಹ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೇವು. ನಾನು 30 ವರ್ಷಕ್ಕಿಂತ ಹೆಚ್ಚು ಸದರಿ ಇಲಾಖೆಯಲ್ಲಿ ಸೇವೆ ಸಲ್ಲಿಸಿದ್ದೇನೆ. 1ನೇ ಪ್ರತಿವಾದಿ ನನಗೆ ಬಹಳ ಆತ್ಮೀಯ ಎಂದರೆ ನಿಜ. ನಾವು ಏನಾದರೂ ವ್ಯವಹಾರ ಮಾಡಬೇಕಾದರೆ ಒಬ್ಬರಿಗೊಬ್ಬರು ಚರ್ಚೆ ಮಾಡಿಕೊಂಡು ಮಾಡುತ್ತೇವೆ. ಅದೇ ರೀತಿ ನಾವು ಒಬ್ಬರಿಗೊಬ್ಬರು ಹಣಕಾಸಿನ ಸಹಾಯವನ್ನು ಮಾಡುತ್ತೇವೆ.

ನಾನು ಮತ್ತು 1ನೇ ಪ್ರತಿವಾದಿಗೆ ಸೇವೆಗೆ ಸೇರಿಕೊಂಡಾಗ ನಮ್ಮ ಮೂಲ ವೇತನ ಮಾಸಿಕ ರೂ.65/- ಇತ್ತು ಎಂದರೆ ನಿಜ. ಸಾಕ್ಷಿ ತುಟ್ಟಿಭತ್ಯೆಯನ್ನು ಸೇರಿ ಒಟ್ಟು ರೂ.125/- ಪ್ರತಿ ತಿಂಗಳು ಇತ್ತು ಎಂದು ನುಡಿಯುತ್ತಾರೆ. ಸದರಿ ಮಾಸಿಕ

ವೇತನದಲ್ಲಿ ಕುಟುಂಬದ ಖರ್ಚು ವೆಚ್ಚ ಕಳೆದು ಹಣ ಉಳಿಯುತ್ತಿತ್ತು. 1ನೇ ಪ್ರತಿವಾದಿ ತನ್ನ ವೇತನದಲ್ಲಿ ಎಷ್ಟು ಹಣ ಉಳಿಸುತ್ತಿದ್ದ ಎಂದರೆ ಅದು ಆತನಿಗೆ ಗೊತ್ತು. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆ.

ಸಾಕ್ಷ್ಯ ನುಡಿಯಲು ನನಗೆ ನ್ಯಾಯಾಲಯದಿಂದ ಯಾವುದೇ ನೋಟಿಸು ವಗೈರೆ ಬಂದಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಬರೆದ ಸಂಗತಿಗಳ ಬಗ್ಗೆ ನನಗೆ ಗೊತ್ತಿರುತ್ತದೆ. ಬೆಲ್ಲದಬಾಗೇಬಾಡಿಯಲ್ಲಿರುವ ದಾವಾ ಜಮೀನು 1ನೇ ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿ ಇರುತ್ತದೆ. ಸದರಿ ಪಿತ್ರಾರ್ಜಿತ ಆಸ್ತಿಯ ಉತ್ಪನ್ನದಿಂದ 3 ರಿಂದ 5ನೇ ಆಸ್ತಿಗಳನ್ನು 1ನೇ ಪ್ರತಿವಾದಿ ಖರೀದಿಸಿರುತ್ತಾನೆ ಎಂದರೆ ಸರಿಯಲ್ಲ. ಪಿತ್ರಾರ್ಜಿತ ಆಸ್ತಿಗಳಲ್ಲಿ 1ನೇ ಪ್ರತಿವಾದಿ ಆತನ ಸಹೋದರರಿಗೆ ಆಸ್ತಿಗಳನ್ನು ಹಂಚಿಕೆ ಮಾಡಿಕೊಟ್ಟ ಬಗ್ಗೆ ನಾನು ದಾಖಲೆಗಳನ್ನು ನೋಡಿಲ್ಲ.

1ನೇ ಪ್ರತಿವಾದಿ ತನ್ನ ವೇತನದಲ್ಲಿ ಯಾವುದೇ ಹಣ ಉಳಿಸುತ್ತಿರಲಿಲ್ಲ, ಆತ ಕುಡಿತದ ಚಟಕ್ಕೆ ಬಲಿಯಾಗಿದ್ದ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಜೂಜಾಟ ಆಡುವುದು, ಮಧ್ಯಪಾನ ಮಾಡುವುದು ಮಾಡುತ್ತಿದ್ದ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ತನ್ನ ವೇತನದಲ್ಲಿ ಯಾವುದೇ ಹಣ ಉಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಅ.ನಂ.3 ರಿಂದ 5ನೇ ಆಸ್ತಿಗಳನ್ನು ಖರೀದಿಸುವ ಸಮಯದಲ್ಲಿ ನಾನು ಇರಲಿಲ್ಲ, ಆದರೆ ಆ ಬಗ್ಗೆ ನಾನು 1ನೇ ಪ್ರತಿವಾದಿಯಿಂದ ಕೇಳಿ ತಿಳಿದುಕೊಂಡಿರುತ್ತೇನೆ. ನಾನು 1ನೇ ಪ್ರತಿವಾದಿಗೆ ಸಹಾಯ ಮಾಡಲು ಆತನು ಹೇಳಿದಂತೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3ನೇ ಪ್ರತಿವಾದಿಗೆ ಹಾನಿ ಮಾಡಬೇಕು ಹಾಗೂ ಆತನಿಗೆ ದಾವಾ ಆಸ್ತಿಗಳಲ್ಲಿ ಯಾವುದೇ ಪಾಲು ಹೋಗಬಾರದೆಂದು 1ನೇ ಪ್ರತಿವಾದಿಯ ಹೇಳಿದಂತೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 3ನೇ ಪ್ರತಿವಾದಿಯು ಸಹ ನೌಕರಿ ಮಾಡುತ್ತಿದ್ದು, ತನ್ನ ವೇತನವನ್ನು 1ನೇ ಪ್ರತಿವಾದಿಗೆ ಕೊಡುತ್ತಿದ್ದು, ಸದರಿ ಹಣದಿಂದ 1ನೇ ಪ್ರತಿವಾದಿ ಅ.ನಂ.3 ರಿಂದ 5ನೇ ಆಸ್ತಿಗಳನ್ನು ಖರೀದಿಸಿರುತ್ತಾನೆ ಎಂದರೆ ಸರಿಯಲ್ಲ.

3 ಮತ್ತು 4ನೇ ಪ್ರತಿವಾದಿಯರು ತಮ್ಮ ತಮ್ಮ ಮಧ್ಯ ಹೊಂದಾಣಿಕೆಯಾಗದ ಕಾರಣ ಬೇರೆ ಬೇರೆ ಮನೆಗಳಲ್ಲಿ ವಾಸವಾಗಿರುತ್ತಾರೆ ಎಂದರೆ ನಿಜ. 3ನೇ ಪ್ರತಿವಾದಿ ದಾವಾ ಅ.ನಂ.5 ರಲ್ಲಿ ವಾಸವಾಗಿರುತ್ತಾನೆ ಎಂದರೆ ನಿಜ. ಅದೇ ರೀತಿ 1 ಮತ್ತು 2ನೇ ಪ್ರತಿವಾದಿ ದಾವಾ ಅ.ನಂ.4 ರಲ್ಲಿ ವಾಸವಾಗಿರುತ್ತಾರೆ ಎಂದರೆ ನಿಜ. ಅದೇ ರೀತಿ 4ನೇ ಪ್ರತಿವಾದಿ ದಾವಾ ಅ.ನಂ.3 ರಲ್ಲಿ ವಾಸವಾಗಿರುತ್ತಾನೆ ಎಂದರೆ ಸಾಕ್ಷಿಯು ಆತ ತಂದೆ ತಾಯಿಯ ಜೊತೆ ವಾಸವಾಗಿದ್ದಾನೆ ಎಂದು ನುಡಿಯುತ್ತಾರೆ. ಅವರು ತಮ್ಮ ತಮ್ಮ ಮಧ್ಯ ಮನೆ ಆಸ್ತಿಗಳಿಗೆ ಸಂಬಂಧಿಸಿದಂತೆ ಹಕ್ಕು ಬಿಟ್ಟ ಪತ್ರ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಎಲ್ಲಾ ವಿಚಾರಗಳೂ ನನಗೆ ಗೊತ್ತಿದ್ದರೂ ಸಹ 1ನೇ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ